ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಸಮಿತಿ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ)

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 10/03/2020

## ದೇವದಾಸಿಯರ ಅನುದಾನ ಹೆಚ್ಚಳಕ್ಕೆ ಸರಕಾರಕ್ಕೆ ಶಿಫಾರಸು

# ವಿಶೇಷಚೇತನರ ಮಾಸಿಕ ಭತ್ಯೆ ಹೆಚ್ಚಳ?

**ವಿಕ ಸುದ್ದಿಲೋಕ** ಬೆಂಗಳೂರು 10/3/20

ವಸತಿ ರಹಿತ ಮಾಜಿ ದೇವದಾಸಿಯರ ಅನುದಾನವ ಮೊತ್ತವನ್ನು 2 ಲಕ್ಷ ರೂ.ಗಳಿಂದ 5 ಲಕ್ಷ ರೂ.ಗೆ ಹಾಗೂ ಶೇ.75ಕ್ಕಿಂತಲೂ ಹೆಚ್ಚು ಅಂಗವಿಕಲತೆ ಹೊಂದಿರುವ ಬಡ ವಿಶೇಷಚೇತನರ ಮಾಸಿಕ ನಿರ್ವಹಣಾ ಭತ್ಯೆಯನ್ನು 1400 ರೂ.ಗಳಿಂದ 3 ಸಾವಿರ ರೂ.ಗಳಿಗೆ ಹೆಚ್ಚಿಸುವುದೂ ಸೇರಿದಂತೆ 19 ಶಿಫಾರಸುಗಳನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ ಮಾಡಿದೆ.

ಶಾಸಕಿ ಕೆ.ಪೂರ್ಣಿಮ ಅಧ್ಯಕ್ಷತೆಯ ಸಮಿತಿಯ ವರದಿಯನ್ನು ವಿಧಾನಸಭೆಯಲ್ಲಿ ಸೋಮವಾರ ಮಂಡಿಸಲಾಯಿತು.

ಈ ವರದಿಯಲ್ಲಿ ಸಮಿತಿ ಸರಕಾರಕ್ಕೆ ಹಲವು ಶಿಫಾರಸುಗಳನ್ನು ಮಾಡಿದೆ. ಅಂಗನವಾಡಿ ಕಟ್ಟಡಗಳ ನಿರ್ವಹಣೆಗೆ ಸರಕಾರ ತಾಲೂಕುವಾರು ವಿಶೇಷ ಅನುದಾನ ಬಿಡುಗಡೆ ಮಾಡಬೇಕು. ಹೊಸ ಬಾಲಭವನ ನಿರ್ಮಾಣದ ಬದಲಿಗೆ ಹಾಲಿ ಇರುವ ಬಾಲಭವನಗಳನ್ನೇ ಉತ್ತಮ ರೀತಿಯಲ್ಲಿ ಅಭಿವೃದ್ಧಿ ಪಡಿಸಬೇಕು. ರಾಜ್ಯ ಮಹಿಳಾ ಆಯೋಗಕ್ಕೆ ಅಧ್ಯಕ್ಷರು, ಸದಸ್ಯರನ್ನು ಶೀಘ್ರ ನೇಮಿಸಬೇಕು ಎಂದು ಸರಕಾರವನ್ನು ಕೋರಲಾಗಿದೆ.

ಅಂಗನವಾಡಿ ಮಕ್ಕಳಿಗೆ ಸಮವಸ್ತ್ರ, ಸ್ವೆಟರ್ ನೀಡುವಂತೆ ಕಳುಹಿಸಿರುವ ಇಲಾಖೆ ಪ್ರಸ್ತಾವನೆಯನ್ನು ಹಣಕಾಸು ಇಲಾಖೆ ಪರಿಗಣಿಸಬೇಕು. ಗರ್ಭಿಣಿಯರು ಖಾಸಗಿ ಆಸ್ಪತ್ರೆಗಳಲ್ಲಿ ಸ್ಕ್ಯಾನಿಂಗ್ ಮಾಡಿಸಿಕೊಳ್ಳಲು ಅವಕಾಶ ಕಲ್ಪಿಸಿ ಅದರ ವೆಚ್ಚವನ್ನು ಸರಕಾರ ಭರಿಸಬೇಕು ಎಂದು ಸಮಿತಿ ಸರಕಾರವನ್ನು ಒತ್ತಾಯಿಸಿದೆ.

ಗರ್ಭಿಣಿಯರಿಗೆ ಕಡ್ಡಾಯವಾಗಿ ಔಷಧಿಯನ್ನು ಸರಕಾರಿ ಆಸ್ಪತ್ರೆಗಳಲ್ಲಿಯೇ ನೀಡಬೇಕು, ಸೂಕ್ತ ಆ್ಯಂಬುಲೆನ್ಸ್ ವ್ಯವಸ್ಥೆ ಮಾಡಬೇಕು. ಗ್ರಾಮೀಣ ಪ್ರದೇಶದ ವೈದ್ಯರಿಗೆ ಸೂಕ್ತ ವಸತಿ, ಗೃಹ ಸೌಲಭ್ಯ ಕಲ್ಪಿಸಬೇಕು. ಕಿವುಡು, ದೃಷ್ಟಿ ದೋಷವುಳ್ಳ ಮಕ್ಕಳಿಗೆ ಪ್ರತಿ ಜಿಲ್ಲೆಯಲ್ಲೂ ವಿಶೇಷ ಶಾಲೆ ಸ್ಥಾಪಿಸಬೇಕು ಎಂದು ವರದಿಯಲ್ಲಿ ತಿಳಿಸಲಾಗಿದೆ.

ಸಾಂದರ್ಭಿಕ ಚಿತ್ರ



**2ರಿಂದ5 ಲಕ್ಷ**
**ದೇವದಾಸಿಯರ ಅನುದಾನ ಹೆಚ್ಚಳ**

**1400ರಿಂದ 3000**
**ವಿಶೇಷಚೇತನರ ಮಾಸಿಕ ಭತ್ಯೆ ಏರಿಕೆ**

**20ರಿಂದ30 ಸಾವಿರ**
**ಬುದ್ಧಿಮಾಂದ್ಯ ಮಕ್ಕಳ ನಿರ್ವಹಣೆಗೆ ಪರಿಹಾರ ಧನ**

### ಸಮಿತಿಯ ಶಿಫಾರಸುಗಳು

- ಬೇರೆ ಬೇರೆ ಇಲಾಖೆಗಳಲ್ಲಿ ಖರ್ಚಾಗದೇ ಉಳಿದಿರುವ ಹಣವನ್ನು ವಿಶೇಷಚೇತನರ ಕಲ್ಯಾಣ ಇಲಾಖೆಗೆ ನೀಡಬೇಕು.
- ಪ್ರತ್ಯೇಕ ಅಡುಗೆ ಮನೆ, ಶೌಚಾಲಯ, ಸ್ಟೋರ್ ರೂಂಗಳಿರುವ ರೀತಿಯಲ್ಲಿ ಕಟ್ಟಡಗಳ ವಿನ್ಯಾಸ ಬದಲಾಯಿಸಿ ಎಲ್ಲಾ ಕಡೆ ಒಂದೇ ಮಾದರಿ ಅಂಗನವಾಡಿ ಕಟ್ಟಡ ನಿರ್ಮಿಸಬೇಕು.
- ಶೋಷಿತ ಮಹಿಳೆಯರಿಗೆ ಪ್ರತಿ ಜಿಲ್ಲೆಯಲ್ಲಿ ಕೌಶಲ್ಯ ತರಬೇತಿ ಮತ್ತು ಘಟಕ ಸ್ಥಾಪಿಸಿ ಉದ್ಯೋಗ ನೀಡಬೇಕು.
- ಶೇ. ನೂರರಷ್ಟು ಅಂಗವಿಕಲತೆವುಳ್ಳವರು ಹಾಗೂ ಹಿರಿಯ ನಾಗರಿಕರಿಗೆ ವಿಮಾ ಪಾಲಿಸಿ ನೀಡಲು ಕ್ರಮ ಕೈಗೊಳ್ಳಬೇಕು.
- ಬುದ್ಧಿಮಾಂದ್ಯ ಮಕ್ಕಳ ಜೀವನ ನಿರ್ವಹಣೆಗಾಗಿ ಕುಟುಂಬದ ನಾಮನಿರ್ದೇಶಿತ ಸದಸ್ಯರಿಗೆ ನೀಡುವ ಪರಿಹಾರ ಧನವನ್ನು 20 ಸಾವಿರ ರೂ.ಗಳಿಂದ 30 ಸಾವಿರ ರೂ.ಗಳಿಗೆ ಹೆಚ್ಚಿಸಬೇಕು.
- ಬುದ್ಧಿಮಾಂದ್ಯರ ಪಾಲನೆಗಾಗಿ ಬೆಂಗಳೂರು ಮಾತ್ರವಲ್ಲದೆ ಎಲ್ಲಾ ಜಿಲ್ಲೆ ಹಾಗೂ ತಾಲೂಕುಗಳಲ್ಲಿಯೂ ಹಗಲು ಯೋಗಕ್ಷೇಮ ಕೇಂದ್ರಗಳನ್ನು ತೆರೆಯಬೇಕು.
- ವೈದ್ಯಕೀಯ, ಎಂಜಿನಿಯರಿಂಗ್, ದಂತ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವವರಿಗೆ ನೀಡುತ್ತಿರುವ ವಿದ್ಯಾರ್ಥಿ ವೇತನವನ್ನು 5ರಿಂದ 10 ಸಾವಿರ ರೂ.ಗಳಿಗೆ ಹೆಚ್ಚಿಸಬೇಕು.